


'ಟೂ ಇನ್ ಒನ್' ಕಂಚುಕ. ಕಸದಿಂದ ರಸ ತೆಗೆಯುವ ಜಪಾನೀಯರು 'ನಿಮ್ಮದೇ ಆದ ಭತ್ತ ಬೆಳೆಯಿರಿ' ಎಂಬ ಘೋಷಣೆಯೊಂದಿಗೆ ಈ ಕಂಚುಕ ಮಾರುಕಟ್ಟೆಗೆ ತಂದಿದ್ದಾರೆ. ಮಾನಿನಿಯ ಮಾನ ಮುಚ್ಚಲು, ಹೊಟ್ಟೆಯ ಹಸಿವು ಇಂಗಿಸಲು ಎರಡಕ್ಕೂ ಈ ಬ್ರಾ ಬಳಕೆಯಂತೆ. ಹೊರಗೆ ಹೋಗುವಾಗ ಮೈಮೇಲೇರಿಸುವುದು, ಮನೆಯೊಳಗೆ ಬಂದ ಕೂಡಲೇ ಮೂಲೆಯಲ್ಲಿಟ್ಟು ನೀರು ಹಾಕುವುದು.. ಅಷ್ಟಕ್ಕೂ ಬೆಳೆಯುವುದು ಭತ್ತವೇ ಅನ್ನೋ ಗ್ಯಾರಂಟಿ ಇದೆಯಾ?

ಅಮೆರಿಕದ ಡೆನ್ವರ್‌ನ ಗೋಬಿ ಜೋನ್ಸ್ ಬರೀ ಗೋಬಿ ಮಂಚೂರಿ ತಿಂದು ದಪ್ಪಗಾಗಿದ್ದಲ್ಲ, ದಪ್ಪಗಿರುವವರ ಆತ್ಮವಿಶ್ವಾಸ ಹೆಚ್ಚಿಸಲು ಹೋಗಿ ಕೊಬ್ಬಿನಂಶ ಇರುವುದನ್ನೆಲ್ಲ ತಿಂದು ಈಗ 502 ಪೌಂಡ್ ತೂಗುತ್ತಿದ್ದಾಳೆ. ದಢೂತಿ ದೇಹದವರಿಂದ ಅಮೆರಿಕದ ಆರ್ಥಿಕತೆಗೆ ಕನ್ನ ಎಂದು ಅಧ್ಯಕ್ಷ ಒಬಾಮ ಘೋಷಿಸಿದರೆ, 'ಕೊಬ್ಬಿನ ಖಜಾನೆ ಹೆಚ್ಚಿಸಿ' ಎಂಬ ಘೋಷಣೆಯೊಂದಿಗೆ ಈಕೆ ಜಾಹೀರಾತಿಗೆ ಇಳಿದಿದ್ದಾಳೆ.



ಐಸ್‌ಲ್ಯಾಂಡ್ ಜ್ವಾಲಾಮುಖಿ ಬೂದಿ ಕಾರಿ ಸಾವಿರಾರು ಪ್ರಯಾಣಿಕರನ್ನು ವಿಮಾನ ನಿಲ್ದಾಣದಲ್ಲೇ ಮಲಗಿಸಿತು. ಈಗ ಅದೇ ಬೂದಿಯನ್ನು ಇಂಟರ್‌ನೆಟ್ ಕಂಪೆನಿಯೊಂದು ಮಾರಾಟ ಮಾಡುತ್ತಿದೆ. 160 ಗ್ರಾಂ ಪೊಟ್ಟಣಕ್ಕೆ 30 ಡಾಲರ್. 133 ದೇಶಗಳ ಜನ ವಿಚಾರಿಸಿದ್ದಾರಂತೆ. ವಿಷಯ ತಿಳಿದಿದ್ದೇ ಆಸುಪಾಸಿನ ಮಂದಿ ಬೂದಿ ಗುಡ್ಡೆ ಮಾಡಲು ಶುರು ಮಾಡಿದ್ದಾರೆ. ಈ ಬೂದಿಯನ್ನು ಸ್ವಚ್ಛಗೊಳಿಸಲು ತಲೆಕೆಡಿಸಿಕೊಂಡಿದ್ದ ಅಲ್ಲಿಯ ಸರ್ಕಾರ ಈಗ ಆರಾಮವಾಗಿ ಕೂತಿದೆ.

ಬ್ಯೂನಸ್ ಐರೀಸ್‌ನಲ್ಲಿ ಗ್ರೀನ್‌ಪೀಸ್ ಕರೆಗೆ ಓಗೊಟ್ಟ ಮಂದಿ ಇನ್ನೂ ಹೊಸದಾಗೇ ಇದ್ದ ಟಿವಿ ಸೆಟ್‌ಗಳನ್ನು ಪೀಸ್ ಪೀಸ್ ಮಾಡಿ ಬೀದಿಗೆ ತಂದಿಟ್ಟರು. ಟಿವಿಯಂಥ ಎಲೆಕ್ಟ್ರಾನಿಕ್ ವಸ್ತುವಿನಲ್ಲಿ ವಿಷವಿರುತ್ತದೆ ಎಂದು ಹೇಳಿದ್ದೇ ತಡ ಎಲ್ಲ ಸೆಟ್‌ಗಳೂ ಹೊರಗೆ ಬಂದವು. ತಿನ್ನುವ ಊಟದಲ್ಲಿ ಕೂಡಾ ವಿಷದ ಅಂಶವಿರುತ್ತದೆ ಎಂದರೆ... ಹೊಟ್ಟೆಯೊಳಗಿರುವುದನ್ನೆಲ್ಲ ಹೊರಗೆ ಹಾಕಲು ಹಿಂಜರಿಯದವರು ಈ ಮಂದಿ.





ಲಾಸ್‌ಏಂಜಲೀಸ್‌ನಲ್ಲಿ ಕಳೆದ ಅಕ್ಟೋಬರ್‌ನಲ್ಲಿ ಹ್ಯಾಲೊವೀನ್ ಹಬ್ಬದ ಮೆರವಣಿಗೆಯಲ್ಲಿ ಕಂಡ 'ರೀಸೈಕಲ್ಡ್' ಮನುಷ್ಯ. ಈಗ ಕುಡಿಯುವ ನೀರು, ತೊಡುವ ಬಟ್ಟೆ ಎಲ್ಲವೂ ರೀಸೈಕಲ್ಡ್. ಅಂಗಾಂಗ ಕಸಿಯಿಂದ ದೇಹವೂ ರೀಸೈಕಲ್. ಮೆದುಳೂ ಆದರೆ ಮುಂದಿನ ತಲೆಮಾರೇ ರೀಸೈಕಲ್..

ರಾಜಮಹಾರಾಜರ ಕಾಲದಲ್ಲಿ ಅಂತಃಪುರದಲ್ಲಿ ಓಡಾಡಿಕೊಂಡಿದ್ದ ಹಿಜ್ರಾಗಳು ಈಗ ಆಧುನಿಕ ರಾಜರಾದ ರಾಜಕಾರಣಿಗಳ ಕಾವಲಿಗೆ ನಿಲ್ಲುತ್ತಾರಂತೆ. ಈ ಐಡಿಯಾ ಬಂದಿದ್ದು ಅರುಣಾಚಲ ಪ್ರದೇಶದ ಗೃಹಮಂತ್ರಿ ಟಾಕೊ ದಬಿ ಅವರಿಗೆ. ಕಳೆದ ಮಾರ್ಚ್‌ನಲ್ಲಿ ಕರ್ತವ್ಯದಲ್ಲಿದ್ದ ಪೊಲೀಸರು ಮದ್ಯ ಸೇವಿಸಬಹುದು ಎಂದಿದ್ದ ದಬಿ ಈ ಐಡಿಯಾವನ್ನು ಕೇಂದ್ರಕ್ಕೂ ಪುಕ್ಕಟೆಯಾಗಿ ಕೊಟ್ಟಿದ್ದಾರೆ.



ಮೆಕ್ಸಿಕೋದಲ್ಲಿ ಮಾದಕದ್ರವ್ಯ ದೊರೆಗಳದ್ದೇ ಕಾರುಬಾರು. ಅಂದಕಾಲತ್ತಿನ ದೊರೆಗಳು ತಲೆಗೆ ಬಂಗಾರದ ಕಿರೀಟ ಹಾಕಿಕೊಂಡು ಮೆರೆದರೆ ಈ ದೊರೆಗಳು ಚಿನ್ನದ, ವಜ್ರ ಅಳವಡಿಸಿದ ಪಿಸ್ತೂಲು ಇಟ್ಟುಕೊಂಡು ಷೋಕಿ ಮಾಡುತ್ತಾರಂತೆ. ಹುಡುಕಲು ಹೊರಡುವುದು ಮಾದಕ ವಸ್ತುವನ್ನೋ, ಪಿಸ್ತೂಲನ್ನೋ ಎಂಬ ಗೊಂದಲವಂತೆ ಪೊಲೀಸರಿಗೆ!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65